ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 2nd August 1978/Shravana 11, 1900 S.E.

The House met in the Assembly Chamber, Vidhana Soudha, at one of the Clock.

[MR. SPEAKER (SRI P. VENKATARAMANA) in the Chair].

STARRED QUESTIONS
(to which oral answers were given)

Taking over of Mysore Palace and its Articles.

171 SRI H. GANGADHARAN (KRISHNARAJA) Will the Chief Minister be pleased to state:—

(a) whether the Mysore Palace with articles therein have been acquired by the Government;

(b) the movables acquired by the Government from the Palace;

(c) the terms of agreement entered into for acquisition of movables by the Government;

(d) whether compensation has been paid to the Royal family in this behalf;

(e) if so, the amount;

(f) the decision taken by the Government as to the manner in which the Palace is to be utilised in future?

SRI D. DEVARAJ URS (Chief Minister):—

(a) A portion of the Mysore Palace and certain movables of the Palace have been acquired by the Government.

(b) As per list appended.

(c) An agreement has been entered into with the Royal Family while acquiring the same.

(d) No.

(e) This question does not arise.

(f) The Government has decided to convert the Mysore Palace as historical museum and to keep it open for the public.

STATEMENT

List of movables taken possession of from Mysore Palace.

	Movables		Numbers
1.	Vase	...	43
2.	Sofa	...	13
3.	Mirrors	...	19
4.	Mats, ruge	...	126
5.	Tables	...	33
6.	Chairs	...	194
7.	Paintings, Photographs	...	157
8.	Carpets	...	222
9.	Stands	...	14
10.	Teapoys, stools	...	7
11.	Statues	...	65
12.	Hall statues on silver plates	...	36
13.	Idols	...	9
14.	Ornamental Articles	...	9
15.	Spring cots	...	2
16.	Trophys	...	93
17.	Cushions	...	56
18.	Walking Sticks	...	5
19.	Weapons (Swords, shields, arrow, lances, axes. daggers etc)	...	821
20.	Gun carriage & dragging carts	...	11
21.	Wardrobe	...	1
22.	Caskets of different kinds presented to Maharaja	...	230
23.	Hammers (Wooden, Iron, etc.)	...	70
24.	Model plane	...	1
25	Wooden bisons on metel plates	...	3
26.	Mise. nems (Wooden boxes benches etc.)	...	28

ಸ್ವಾಮಿ. ಕನ್ನಡದಲ್ಲಿ ಪ್ರಿಂಟ್ ಆಗಿರುವುದು ಸರಿಯಾಗಿದೆ. ಅಂದರೆ ಇಂಗ್ಲಿಷ್‌ನಲ್ಲಿ ನೋ ಎನ್ನುವುದು ಕನ್ನಡದಲ್ಲಿ ''ಮಾಡಿದೆ'' ಎಂದು ಹೇಳಿದೆ. ಇದು ಸರಿಯಲ್ಲ ಇನ್ನೊಂದು, ಅರಮನೆಯ ವಸ್ತುಗಳನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಾಗ ರಾಜ ಮನೆತನದೊಂದಿಗೆ ಕರಾರುಪತ್ರವನ್ನು ಮಾಡಿಕೊಂಡಿಲ್ಲ ಎಂಬುದು ಇಂಗ್ಲೀಷ್‌ನಲ್ಲಿ (೫) ನಲ್ಲಿ ''ಮಾಡಿಕೊಂಡಿದೆ'' ಎಂದು ಆಗಿದೆ. ಇದನ್ನು ಮಾನ್ಯ ಸದಸ್ಯರು ಸರಿಮಾಡಿ ಕೊಳ್ಳಬಹುದು.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಅರಮನೆಯ ಒಂದು ಭಾಗವನ್ನು ಮಾತ್ರ ಸರ್ಕಾರದ ವಶಕೆ ತೆಗೆದುಕೊಳ್ಳಲಾಗಿದೆ. ಎಂದು ಇಲ್ಲಿ ಹೇಳಿದ್ದೀರಿ. ಆಲ್ಲಿ ಗನ್ ಹೌಸ್ ಇದೆ. ಅದನ್ನು ಏತಕ್ಕೆ ತೆಗೆದುಕೊಂಡಿಲ್ಲ, ಮತ್ತು ಪೂರ್ತಿ ಅರಮನೆಯನ್ನು ಏತಕ್ಕೆ ತಾವು ತಮ್ಮ ವಶಕ್ಕೆ ತೆಗೆದುಕೊಂಡಿಲ್ಲ?

† ಶ್ರೀ ಡಿ. ದೇವರಾಜ್ ಅರಸ್ —ಹಿಂದೆ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಇದ್ದಾಗ ಆದನ್ನು ಟ್ರಸ್ಟ್ ಗೋಸ್ಕರ ಕೊಡುವುದಾಗಿ ಹೇಳಿದ್ದರು. ತಾವು ಹೇಳುತ್ತಿರುವ ಗನ್ ಹೌಸ್ ಏನಿದೆ ಆದು ಅವರಿಗೇ ಸೇರಿದ್ದು. ಅವರು ಆದನ್ನು ಕೊಟ್ಟರೆ ನಾವು ತೆಗೆದು ಕೊಳ್ಳುತ್ತೇವೆ; ಇಲ್ಲದಿದ್ದರೆ. ಇಲ್ಲ. ಹಿಂದೆ ಆ ಮಹಾರಾಜರು ಆದನ್ನು ಮ್ಯೂರಬೇಕೆಂದಿದ್ದರು. ಆಗ ನಾವು ಆದನ್ನು ನಮ್ಮ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಬೇಕೆಂದು ಕೇಳಿದ್ದೆವು. ಆದರೆ ನಮ್ಮ ಇಲಾಖೆಯವರು ಆದು ಬೇಡ ಎಂದು ಹೇಳಿದರು. ಅಷ್ಟಕ್ಕೇ ನಾವೂ ಸುಮ್ಮನಾದೆವು. ಈಗಲೂ ಸಹ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಅವರು ಆದನ್ನು ಮಾರಾಟ ಮಾಡುವುದಾದರೆ ಆದನ್ನು ನಾವೇ ತೆಗೆದುಕೊಳ್ಳುತ್ತೇವೆ. ಏಕೆಂದರೆ ಬೇರೆಯವರು ಆದನ್ನು ಕೊಂಡು ಕೊಂಡು ಅಲ್ಲಿ ಏನಾದರು ಕಟ್ಟಿದರೆ ಆ ಸುತ್ತಮುತ್ತಲ್ಲಿನ ಪ್ರದೇಶದ ಲಕ್ಷಣವೇ ಹೋಗಿಬಿಡುತ್ತದೆ. ಆದರೆ ಅವರಾಗಿ ಅವರೇ ಕೋಡದೇ ಹೋದರೆ ನಾವು ಆದನ್ನು ಒತ್ತಾಯ ಮಾಡಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾವು ಆದನ್ನು ಆಕ್ವೈರ್ ಮಾಡಿಲ್ಲ ಹಿಂದೆ ಅವರು ಇದ್ದಾಗ ಟ್ರಸ್ಟ್‌ಗೆ ಆದನ್ನು ಕೊಡುತ್ತೇವೆಂದು ಹೇಳಿದ್ದರು ಆದರೆ ಅವರು ಕಾಲವಾಗುವುದರೊಳಗೆ ಆ ಟ್ರಸ್ಟ್‌ನ್ನು ಮಾಡುವುದಕ್ಕಾಗಲಿಲ್ಲ, ಇದಕ್ಕೆ ಕಾರಣ ಅವರ ಕುಟುಂಬದಲ್ಲಿ ಅವರ ಮಾತನ್ನು ಯಾರೂ ಕೇಳುತ್ತಿರಲಿಲ್ಲ. ಟ್ರಸ್ಟ್ ಡೀಡ್‌ಬರೆದು ಎಲ್ಲಾ ರೆಡಿ ಆಗಿತ್ತು, ಆದರೆ ಆಷ್ಟರಲ್ಲಿ ಆ ಬಗ್ಗೆ ಸೆಂಟ್ರಲ್ ಟ್ಯಾಕ್ಸ್ ವಿಚಾರ ಬಂದು ಅಲ್ಲಿನ ಕಮಿಷನರ್‌ರವರಿಂದ ಇದಕ್ಕೆ ಅಪ್ಪಣೆ ಪಡೆಯ ಬೇಕಾಗಿದೆ ಎಂದು ತಿಳಿದು ಬಂತು. ಆದ್ದರಿಂದ ಆ ಟ್ರಸ್ಟ್ ಡೀಡನ್ನು ಪೂರ್ತಿ ಮಾಡುವುದಕ್ಕಾಗಲಿಲ್ಲ. ಈಗ ಅರಮನೆಯ ಮುಂಭಾಗವನ್ನು ಸಾರ್ವಜನಿಕರು ನೋಡುವ ಸಲುವಾಗಿ ಬಿಟ್ಟಿದ್ದಾರೆ ಇದಕ್ಕೆ ಫೀಸ್ ಕೂಡ ವಸೂಲ್ಮಾಡಲಾಗುತ್ತಿದೆ. ಹಿಂಭಾಗದಲ್ಲಿ ಅವರೇ ವಾಸವಾಗಿದ್ದಾರೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ ಈ ಗನ್ ಹೌಸ್ ಏನಿದೆ ಇದನ್ನು ಸುಂದರವಾಗಿ ಇಡ ಬೇಕಾದ್ದು. ಆದರೆ ಅಂಥಾದ್ದನ್ನು ಈಗ ಬಾರಗೆ ಕೊಟ್ಟಿದ್ದಾರೆ, ಅದರ ಸುತ್ತಮುತ್ತ ಕಲ್ಯಾಣ ಮಂದಿರ, ದೇವಸ್ಥಾನ, ಮಠ ಎಲ್ಲಾ ಇವೆ. ಆದ್ದರಿಂದ ಈ ಗನ್ ಹೌಸನ್ನು ಬಾರ್‌ಗೆ ಕೊಟ್ಟಿರುವುದನ್ನು ತಪ್ಪಿಸಬೇಕು. ಇದರ ಜೊತೆಗೆ ಅರಮನೆಯ ಕೆಲವು ವಸ್ತುಗಳನ್ನು ತಾವು ಸರ್ಕಾರದ ವತಕ್ಕೆ ತೆಗೆದು ಕೊಂಡಿರುವುದಾಗಿ ಇಲ್ಲಿ ಹೇಳಿದ್ದೀರಿ. ಇಲ್ಲಿ ಇನ್ನೂ ಚಿರಿತ್ರಾರ್ಹವಾದ ಸಿಂಹಾಸನ, ಬೆಳ್ಳಿ ಕುರ್ಚಿ, ರಥ, ಮಂಟಪ ಮುಂತಾದ ಪ್ರಮುಖವಾದ ಕೆಲವು ವಸ್ತುಗಳಿವೆ, ಅವುಗಳನ್ನೂ ತಮ್ಮ ವತಕ್ಕೆ ತೆಗೆದುಕೊಂಡು ಅವುಗಳನ್ನೆಲ್ಲಾ ಅಭಿಮಾನದಿಂದ ಪ್ರಿಸರ್ವ್ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಡಿ. ದೇವರಾಜ ಅರಸ್.—ಅಭಿಮಾನದ ಬಗ್ಗೆ ಹೇಳಬೇಕೆಂದರೆ, ನನಗೂ ಹೆಚ್ಚಿನ ಅಭಿಮಾನ ಇದೆ. ಈ ವಸ್ತುಗಳನ್ನೆಲ್ಲಾ ಚೆನ್ನಾಗಿ ಇಡಬೇಕು, ಅರಮನೆಯನ್ನು ಚೆನ್ನಾಗಿಡಬೇಕು ಎಂದು ನಾವೇ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಪೂಜೆಗೋಸ್ಕರ ಯಾವುದಾದರೂ ವಸ್ತುಗಳನ್ನು ತೆಗೆದುಕೊಂಡರೆ, ಆದನ್ನು ಪುನಃ ತಂದು ಇಡುತ್ತಿದ್ದಾರೆ. ಕೇಂದ್ರಕ್ಕೂ ಇವರಿಗೂ ಇದರ ಬಗ್ಗೆ ಒಪ್ಪಂದ ಆದಂಥ ಕಾಲದಲ್ಲಿ ಏನೇನು ಕಂಡಿಷನ್ ಇತ್ತು, ಆದನ್ನು ಬಿಟ್ಟು ನಾವು ಯಾವ ವಿಧದಲ್ಲಿಯೂ ಬೇರೆ ಹೋಗುವಂತಿಲ್ಲ. ಹೈದರಾಬಾದ್ ನಿಜಾಮರು ಕೆಲವು ಜ್ಯೂಯಲ್ಸ್‌ಗಳನ್ನು ಆಕ್ಷನ್ ಮಾಡಿಕೊಂಡರು ಎಂದು ಕೇಳಿದ್ದೇವೆ. ಆದೇ ರೀತಿಯಲ್ಲಿ ಇವರೂ ಸಹ ತಮ್ಮ ತಮ್ಮ ವಸ್ತುಗಳನ್ನು ಬೇರೆ ರೀತಿಯಲ್ಲಿ ಮಾರಿಕೊಳ್ಳುವುದಕ್ಕೆ ಅಧಿಕಾರ ಇದೆ. ನಮ್ಮ ಸರ್ಕಾರದ ಉದ್ದೇಶ ಇರುವುದು, ಇದನ್ನು ನಾವು ಹೇಗೆ ಪ್ರಿಸರ್ವ್ ಮಾಡಬೇಕು ಎನ್ನುವುದು; ಇದನ್ನು ನಾವೂ ಪೂರ್ತಿಯಾಗಿ ಆಕ್ವೈರ್ ಮಾಡಿಕೊಳ್ಳಬೇಕೇ ಎನ್ನುವುದು ಇನ್ನು ನೆಗೋಷಿಯೇಷನ್ ಸ್ಟೇಜ್‌ನಲ್ಲಿಯೇ ಇದೆ. ನಮ್ಮ ಮುಖ್ಯ ಕಾರ್ಯದರ್ಶಿಯವರಿಗೂ ಇದರ ಬಗ್ಗೆ ತಿಳಿಸಿದ್ದೇವೆ. ಇನ್ನೂ ಈ ವಿಷಯ ನೆಗೋಷಿಯೇಷನ್ ಸ್ಟೇಜ್‌ನಲ್ಲಿದೆ.

ಶ್ರೀ ಎಚ್. ಗಂಗಾಧರನ್.—ಅರಮನೆಯನ್ನು ವಸ್ತುಸಂಗ್ರಹಾಲಯವನ್ನಾಗಿ ಇಟ್ಟುಕೊಳ್ಳಬೇಕು ಎನ್ನುವುದಕ್ಕೆ ಏನಾದರೂ ಯೋಚನೆ ಇದೆಯೇ ? ದೆಹಲಿಯ ಕೆಂಪುಕೋಟೆಯಲ್ಲಿ ಸೌಂಡ್ ಎಕ್ಸಿಬಿಷನ್ ಮಾಡಿದ್ದಾರೆ, ಆದೇ ರೀತಿಯಲ್ಲಿ ಇಲ್ಲಿಯೂ ಮಾಡುವುದಕ್ಕೆ ಏನಾದರೂ ಯೋಚನೆ ಇದೆಯೇ ?

---

† Indicates that remarks or Speeches have not been revised by the member concerned.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದವರು ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದಾರೆ. ಆದರಲ್ಲಿ ಮುಖ್ಯ ಕಾರ್ಯದರ್ಶಿಗಳು ಮತ್ತು ಜಯಚಾಮರಾಜ ಒಡೆಯರ್ ಅವರ ಮಕ್ಕಳು ಇದ್ದಾರೆ. ಕಮಿಟಿಯವರು ಇಲ್ಲಿ ಸೌಂಡ್ ಎಕ್ಸಿಬಿಷನ್ ಮಾಡಿಸಬೇಕು ಎಂದು ಯೋಚನ ಮಾಡುತ್ತಿದ್ದಾರೆಂದು ನಾನೂ ಕೇಳಿದ್ದೇನೆ.

ಶ್ರೀ ಕೆ. ತಮ್ಮಯ್ಯ.—ವೃತ್ತಪತ್ರಿಕೆಗಳಲ್ಲಿ ಮುಖ್ಯವಾದ ಸಾಮಾನುಗಳನ್ನು ಪರದೇಶಗಳಲ್ಲಿ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ ಎನ್ನುವ ವಿಚಾರ ಬಂದಿತ್ತು, ಅದನ್ನು ತಡೆಗಟ್ಟುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮಾಡಿಯೂ ಆಯಿತು, ಮುಗಿದೂ ಹೋಯಿತು, ಇತ್ತೀಚೆಗೆ ಏನೂ ಅಂಥಾದ್ದು ಕಾಣಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅರಮನೆಯ ಆಸ್ತಿಗೆ ಸಂಬಂಧಪಟ್ಟಂತೆ ಬೆಂಗಳೂರು ಸಿವಿಲ್ ಜಡ್ಜಸ್ ಕೋರ್ಟಿನಲ್ಲಿ ಕೆಲವು ದಾವೆಗಳು ಇದ್ದುವು, ಅವು ಏನಾಗಿವೆ ?

ಶ್ರೀ ಡಿ. ದೇವರಾಜ ಅರಸ್.—ಅದು ನನಗೆ ಗೊತ್ತಿಲ್ಲ. As a lawyer if the hon'ble Member knows he can tell me.

SRI A. LAKSHMISAGAR.—I know something. It may have some bearing.

SRI D. DEVARAJ URS.—When His Highness Sri Jayachamaraja Wodeyar was alive he had constituted two companies. One was known as Chamundi Company. The whole Bangalore Palace was divided into two parts—120 acres into one part and the rest into another part, and they were in different names. During his life time a year or two be fore he died there was some misunderstanding among themselves. He very much wanted that Government should take over the whole thing and on that basis I prepared a Bill, but in the meanwhile he expired. Then his family people also said that I could talk it over because they have to pay Income-Tax, Wealth Tax, Capital Gains Tax and other taxes. So, we prepared a Bill and sent it to the Government of India. In the meanwhile one Mr. Chamarajoo who is also a partner in this company and these people were at loggerheads and cases were filed against His Highness himself, against his son and others and after his death I do not know whether the cases have been withdrawn or not. I have no idea about it. Subsequently it has been between Chamarajoo and the son of late Maharaja. I think that recently they have again come to some compromise or understanding as a result of which I do not know whether the cases are still pending or whether they have been withdrawn because it does not concern us directly. I do not take interest in those matters.

SRI A. LAKSHMISAGAR.—It may help the Government to acquire those properties.

SRI D. DEVARAJ URS.—They did agree that we might acquire when his Highness was alive. Subsequently, they have come forward with some other proposal. I have, however, already informed the

Government of India that we intend to have a Bill on this with a view to acquire it and accordingly Government's intention is to proceed.

ಶ್ರೀ ಎಸ್. ಎಸ್. ಅರಕೇರಿ.—ಬರೋಡ ರಾಜರ ಅರಮನೆಯನ್ನು ಬಿಟ್ಟರೆ ರಾಷ್ಟ್ರದಲ್ಲಿಯೇ ನಮ್ಮ ಮೈಸೂರು ಅರಮನೆಯು ಬಹಳ ಪ್ರಸಿದ್ಧಿಯಾದುದು ಮತ್ತು ಸುಂದರವಾದುದು. ಇದನ್ನು ಐತಿಹಾಸಿಕವಾದ ಅರಮನೆಯನ್ನಾಗಿ ಉಳಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

SRI D. DEVARAJ URS.—We are spending some money. On colouring and painting. ಕಲರಿಂಗ್ ಮತ್ತು ಪೇಂಟಿಂಗ್ ಮಾಡುವುದಕ್ಕೆ ಸಾಮಾನ್ಯರಿಂದ ಆಗುವುದಿಲ್ಲ. ಯಾರಾದರೂ ಹಳೆಯ ಕಾಲದ ಪೇಂಟರ್ ಸಿಕ್ಕರೆ ಅವರನ್ನೇ ಹಿಡಿದು ಮಾಡಿಸಬೇಕು. There are only a few people who know how to prepare that paint; not all can prepare the paint even. We have been doing our best to get all those things re-painted and clean them up. ನಾನು ಮೊದಲೇ ಹೇಳಿದ ಹಾಗೆ ಇದನ್ನು ಒಂದು ಮಾನ್ಯುಮೆಂಟ್ ಆಗಿ ಉಳಿಸಿಕೊಳ್ಳಬೇಕು ಎನ್ನುವುದು ಸರ್ಕಾರದ ಉದ್ದೇಶ. ಅದಕ್ಕಾಗಿ ನಾವು ಒಂದು ಬಿಲ್ಲನ್ನೂ ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ತಾವು ಕೇಂದ್ರ ಸರ್ಕಾರದವರಿಗೂ ಮತ್ತು ಮಹಾರಾಜರಿಗೂ ಒಂದು ಒಪ್ಪಂದವಾಯಿತು, ಅದರಲ್ಲಿ ಸರ್ಕಾರಕ್ಕೆ ಯಾವುದು ಸೇರಬೇಕು ಮಹಾರಾಜರಿಗೆ ಯಾವುದು ಸೇರಬೇಕು ಎಂದು ತೀರ್ಮಾನವಾಗಿದೆ ಎಂದು ಹೇಳಿದ್ದೀರಿ. ಅಂದರೆ ಅದು ಅವರ ಸ್ವಂತ ಆಸ್ತಿ ಎಂದು ತೀರ್ಮಾನವಾಗಿದೆಯೇ ಅಥವಾ ಸರ್ಕಾರದ್ದು ಎಂದು ತೀರ್ಮಾನವಾಗಿದೆಯೇ ?

SRI D. DEVARAJ URS.—We have no legal hold on that in the sense of taking it over. We can only acquire it by a special Act.

*Stocks of Rice Milled in T.A.P.C.M.S. Mundgod, North Kanara District.

193. SRI V. M. GHADI (Haliyal).—Will the Minister for Food and Forests be pleased to state.—

(*a*) whether it is a fact that 1,000 qtls. of rice milled four years back is still lying with T.A.P.C.M.S., Mundgod, North Kanara District and that it has become unfit for human consumption ;

(*b*) whether it is also a fact that rice milled by two years back is lying with Haliyal T.A.P.C.M.S. ;

(*c*) if so, the action taken to lift this rice ?

SRI G. RAME GOWDA (Minister for Food and Forests).—

(*a*) No.

(*b*) No.

(*c*) Does not arise in view of reply to (*a*) above.

ಶ್ರೀ ವಿ. ಎಂ. ಘಾಡಿ.—ನಾನು ಈ ಪ್ರಶ್ನೆಯನ್ನು ೧೯೭೫ರಲ್ಲಿ ಕಳುಹಿಸಿದ್ದೆ, ಇವತ್ತಿನ ದಿವಸ ಉತ್ತರ ಬಂದಿದೆ. ೧೯೭೫ರಲ್ಲಿ ನಾನು ಕೇಳಿದಂಥ ವಿಚಾರಗಳು ಸರಿಯಾಗಿರಲಿಲ್ಲವೇ ?

† ಶ್ರೀ ಜಿ. ರಾಮೆಗೌಡ.—ಅದು ೧೯೭೫ರಲ್ಲಿ ನಿಜವಾಗಿದೆ. ಈಗ ಸ್ಟಾಕ್ ಇಲ್ಲ.